ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,
ನ್ಯಾಯಾಲಯ,ಹೊಸದುರ್ಗ.

ಅಸಲು ದಾವಾ ಸಂಖ್ಯೆ**237/2023** ದಿನಾಂಕಃ **27-07-2026**

ಡಿ.ಡಬ್ಲ್ಯೂಃ **1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ವಾದಿಯ ಪರ ಶ್ರೀ ಎಸ್ ವಿ ವಕೀಲರಿಂದ

1. ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಸ್ವಂತ ಊರು ಬನಸೀಹಳ್ಳಿ. ನಾವು ನನ್ನ ಅಜ್ಜನ ಕಾಲದಿಂದಲೂ ಬನಸೀಹಳಿಯಲ್ಲಿ ವಾಸವಿದ್ದೇವೆ. ವಾದಿಯರು ಈ ದಾವೆಯನ್ನು ರಸ್ತೆಯ ವಿಷಯವಾಗಿ ದಾಖಲಿಸಿರುತ್ತಾರೆ. ವಾದಿ ದಾಖಲಿಸಿರುವ ದಾವೆ ಮತ್ತು ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಸ.ನಂ.72 ಮೂಲತಃ ನನ್ನ ತಂದೆಯ ಕಾಲದಿಂದಲೂ1 ಎಕರೆ 28 ಗುಂಟೆ ವಿಸ್ತೀರ್ಣ ಇರುತ್ತದೆ. ಪ್ರಸ್ತುತ ನನ್ನ ತಾಯಿ 1 ನೇ ಪ್ರತಿವಾದಿಯ ಹೆಸರಿನಲ್ಲಿ 38 ಗುಂಟೆ ದಾಖಲೆ ಇರುತ್ತದೆ. ನಮ್ಮ ಗ್ರಾಮದಲ್ಲಿ ಬನಸೀಹಳಿ ಮತ್ತ ದೊಡ್ಡಘಟ್ಟ ಗ್ರಾಮದ ಮುಖ್ಯ ರಸ್ತೆ ಇರುತ್ತದೆ. ಸದರಿ ರಸ್ತೆ ಕಂತಾಪುರ ಗೇಟ್ ನಿಂದ ಆರಂಭವಾಗಿ ಮಾವಿನಕಟ್ಟೆ ಗ್ರಾಮದವರೆಗೂ ಇರುತ್ತದೆ ಎಂದರೆ ಸರಿ. ಸದರಿ 1 ಎಕರೆ 28 ಗುಂಟೆ ಸದರಿ ಮುಖ್ಯ ರಸ್ತೆಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ಸದರಿ ಜಮೀನಿನ ಪೈಕಿ ನನ್ನ ತಂದೆ ಜೀವಿತ ಕಾಲದಲ್ಲಿ ವಾದಿಯರಿಗೆ ಕೆಲವು ಅಳತೆಯ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

2. ದಸದರಿ ಮುಖ್ಯ ರಸ್ತೆಯ ದಕ್ಷಿಣ ದಿಕ್ಕಿನಲ್ಲಿ 12 ಅಡಿ ರಸ್ತೆ ಇದ್ದು ಸದರಿ ರಸ್ತೆಯ ದಕ್ಷಿಣ ದಿಕ್ಕಿಗೆ 10 ಅಡಿ ಕಚ್ಚಾ ರಸ್ತೆ ಇದ್ದು ಸದರಿ ರಸ್ತೆಗೆ ಹೊಂದಿಕೊಂಡು ನನಗೆ ಸೇರಿದ ಮನೆ ಮತ್ತು ಮನೆಯ ಮುಂದೆ ಅಡಿಕೆ ಸಸಿ ಇರುತ್ತವೆ ಎಂದರೆ ಸರಿ. ಸದರಿ ಮನೆ ಮತ್ತು ಸಸಿಗಳು ಇರುವ ಜಾಗದ ವಿಸ್ತೀರ್ಣ ಪೂ- ಪ 5 ಗುಂಟೆ ಉ-ದ 50 ಅಡಿ ಅಗಲ ಇರುತ್ತದೆ. ಸದರಿ ಜಾಗದ

ಚೆಕ್ಕುಬಂದಿ ಪೂರ್ವಕ್ಕೆ - ಮೇಲಜ್ಜರ ಗೋಡೌನ್, ಪಶ್ಚಿಮಕ್ಕೆ- ಅಜ್ಜಪ್ಪನವರ ಜಮೀನು, ಉತ್ತರಕ್ಕೆ - ಬನಸೀಹಳ್ಳಿ ದೊಡ್ಡಘಟ್ಟ ಮುಖ್ಯ ರಸ್ತೆ ಇರುತ್ತದೆ, ಮತ್ತು ದಕ್ಷಿಣಕ್ಕೆ ವಿರೂಪಾಕ್ಷಪ್ಪ ರವರು ಖರೀದಿಸಿದ ಮನೆ ಇರುತ್ತದೆ. ವಿರೂಪಾಕ್ಷಪ್ಪನವರ ಮನೆಯ ದಕ್ಷಿಣಕ್ಕೆ 1 ನೇ ವಾದಿಯ ಕಟ್ಟಿರುವ ಮನೆ ಇರುತ್ತದೆ. 1 ನೇ ವಾದಿಯ ಮನೆಯ ದಕ್ಷಿಣ ದಿಕ್ಕಿಗೆ ಹನುಮಂತಪ್ಪ ನವರ ಮನೆ, ಅದರ ದಕ್ಷಿಣ ದಿಕ್ಕಿಗೆ 2 ನೇ ವಾದಿಯ ಹಿತ್ತಲು ಇರುತ್ತದೆ ಎಂದರೆ ಸರಿ. ಅದರ ದಕ್ಷಿಣ ದಿಕ್ಕಿಗೆ 3 ನೇ ವಾದಿಯ ಹಿತ್ತಲು ಮನೆ ಇರುತ್ತದೆ. ಸದರಿ 3 ನೇ ವಾದಿಯ ದಕ್ಷಿಣ ದಿಕ್ಕಿಗೆ ನನ್ನ ತಾಯಿಯ ಹೆಸರಿನಲ್ಲಿಇರುವ 38 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿ 38 ಏಕವಾಗಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ 38 ಗುಂಟೆ ಜಮೀನಿಗೆ ನಾನು ಅದೇ ಜಮೀನಿನಲ್ಲಿ ಇರುವ ರಸ್ತೆಯಲ್ಲಿ ಓಡಾಡುತ್ತೇನೆ.

3. ನಿಪಿ-13 ರ ಪೊಟೋದಲ್ಲಿ ದಾರಿ ಇರುವುದು ರಸ್ತೆಯ ರೀತಿ ಕಾಣುತ್ತದೆ. ಸದರಿ ನಿಪಿ-13 ರ ಪೊಟೋದ ರಸ್ತೆಯ ಮದ್ಯದಲ್ಲಿ ಒಂದು ಆಟೋ ಇರುತ್ತದೆ. ಸದರಿ ಆಟೋ ನನಗೆ ಸೇರಿರುತ್ತದೆ. ನಿಪಿ-13 ರ ಪೊಟೋದಲ್ಲಿ ಇರುವ ರಸ್ತೆಯಲ್ಲಿಯೇ ನಾನು ನನ್ನ 38 ಗುಂಟೆ ಜಮೀನಿಗೆ ಓಡಾಡುತ್ತೇನೆ. ಸದರಿ ರಸ್ತೆಯ ಪೂರ್ವಕ್ಕೆ ಗೋಡೌನ್ ಇದ್ದು ಅದರ ಪೂರ್ವಕ್ಕೆ ಶಾಂತಮ್ಮನ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಯಾರ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಬೇರೆ ಜಮೀನು ಇದ್ದು ಅದು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಕಾಲದಿಂದಲೂ ವಾದಿಯರು ಆಸ್ತಿಗಳನ್ನು ಖರೀದಿಸಿದ ನಂತರ ನಿಪಿ-13 ರ ಪೋಟೋದಲ್ಲಿ ತೋರಿಸಿರುವ ರಸ್ತೆಯಲ್ಲಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯರು ಖರೀದಿಸಿದ ಸ್ವತ್ತಿನ ಪೂರ್ವ ದಿಕ್ಕಿಗೆ ಬ್ಲಾಕ್ ನಂ.1 ರ ಲ್ಲಿ ಮೇಲಜ್ಜರ ಗೋಡೌನ್ ಇರುತ್ತದೆ.

4. ವಾದಿಯರು ಖರೀದಿಸಿದ ಕ್ರಯಪತ್ರದಲ್ಲಿಯೂ ಚೆಕ್ಕುಬಂದಿಯಲ್ಲಿ ಪೂರ್ವ ದಿಕ್ಕಿಗೆ ಬ್ಲಾಕ್ ನಂ.1 ಎಂದು ಬರೆದಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ನಾವು ಕ್ರಯಪತ್ರದಲ್ಲಿ 5 ಗುಂಟೆ ಜಮೀನಿಗೆ ರಸ್ತೆಯನ್ನು ಸಹ ಸೇರಿಸಿ

ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರ ಕ್ರಯಪತ್ರದಲ್ಲಿ ಇರುವ ಸಹಿ ನನ್ನದು. ವಾದಿಯರು ಕ್ರಯಕ್ಕೆ ಪಡೆದ ನಂತರ ಸದರಿ ದಾರಿಯಲ್ಲೇ ಓಡಾಡುತ್ತಾ ಇದ್ದಾರೆ ಎಂದರೆ ಸರಿಯಲ್ಲ. 3 ನೇ ವಾದಿ ನಿಪಿ 13 ರ ಫೋಟೋ ದಲ್ಲಿ ಇರುವ ರಸ್ತೇ ಮೂಲಕವೇ ತನ್ನ ಮನೆಗೆ ಓಡಾಡುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಓಡಾಡಲು ಬೇರೆ ಯಾವ ರಸ್ತೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ರಸ್ತೆ ಹೊರತುಪಡಿಸಿ ವಾದಿಯರಿಗೆ ಓಡಾಡಲು ಬೇರೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ .

5. ನಿಪಿ-13 ರ ಫೋಟೋದಂತೆ 2023 ರಲ್ಲಿ ನಾನು ಆಟೋವನ್ನು ದಾರಿಯಲ್ಲಿ ಅಡ್ಡ ನಿಲ್ಲಿಸಿ ವಾದಿಯರಿಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾರಿಗೆ ಅಡ್ಡಲಾಗಿ ಜೆ.ಸಿ.ಬಿ ಯಿಂದ ಗುಂಡಿ ತೋಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ವಿಷಯವಾಗಿ ವಾದಿಯರು ಹೊಸದುರ್ಗ ಪೊಲೀಸ್ ಠಾಣೆಗೆ ದೂರು ನೀಡಿದ್ದು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ನನಗೆ ಪೋಲೀಸರು ಬುದ್ದಿವಾದ ಹೇಳಿ ವಾದಿಯರಿಗೆ ರಸ್ತೆಯಲ್ಲಿ ಓಡಾಡಲು ತೊಂದರೆ ಕೊಡಬಾರದೆಂದು ಹೇಳಿ ಕಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ತೊಂದರೆ ನೀಡಿದ ಕಾರಣ ಈ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸಿದ ನಂತರ ಸದರಿ ರಸ್ತೆಯಲ್ಲಿಓಡಾಡುತ್ತಿದ್ದಾರೆ ಎಂದರೆ ಸರಿ. ನಾನು ವಾದಿಯರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಪ್ರಮಾಣಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.